10) ಯಾವುದೇ ಅಭ್ಯರ್ಥಿಯು ರಾಜ್ಯದಲ್ಲಿ ಮನ್ನಣೆ ಪಡೆದ ರಾಜಕೀಯ ಪಕ್ಷಗಳಿಗೆ ಹಂಚಿಕೆ ಮಾಡಿದ ಚಿಹ್ನೆಗಳನ್ನು ಹೊರತುಪಡಿಸಿ ಉಳಿದ **ಮುಕ್ತ ಚಿಹ್ನೆಗಳ ಪೈಕಿ ಯಾವುದಾದರೂ ಮೂರನ್ನು ಆಯ್ಕೆ ಮಾಡಿಕೊಂಡು ನಾಮಪತ್ರದಲ್ಲಿ ನಮೂದಿಸತಕ್ಕದ್ದು** { " ಮಾನ್ಯ ಮಾಡಿದ ರಾಜಕೀಯ ಪಕ್ಷ " ಎಂದರೆ ಚುನಾವಣಾ ಚಿಹ್ನೆಗಳ (ಮೀಸಲಾತಿ ಹಾಗೂ ಹಂಚಿಕೆ) ಆದೇಶ 1968 ರಡಿ ಭಾರತದ ಚುನಾವಣಾ ಆಯೋಗದಿಂದ ಒಂದು ರಾಷ್ಟ್ರೀಯ ಪಕ್ಷ ಅಥವಾ ಕರ್ನಾಟಕದಲ್ಲಿ ರಾಜ್ಯ ಪಕ್ಷ ಎಂದು ಗುರುತಿಸಲ್ಪಟ್ಟ ಪ್ರತಿಯೊಂದು ರಾಜಕೀಯ ಪಕ್ಷ ) ಯಾವುದೇ ಒಂದು ಮುಕ್ತ ಚಿಹ್ನೆಯನ್ನು ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳು ಆಯ್ಕೆ ಮಾಡಿಕೊಂಡಿದ್ದಲ್ಲಿ ಮೊದಲು ನಾಮಪತ್ರ ಸಲ್ಲಿಕೆ ಮಾಡಿದ ಉಮೇದುವಾರರಿಗೆ ಸದರಿ ಮುಕ್ತ ಚಿಹ್ನೆಯನ್ನು ಹಂಚಿಕೆ ಮಾಡಲಾಗುವುದು **(ಉಮೇದುವಾರರ ಆಯ್ಕೆ ಮಾಡಿಕೊಂಡ ಚಿಹ್ನೆಯು ಹಂಚಿಕೆಯಾಗಿದ್ದಲ್ಲಿ ಅಥವಾ ಲಭ್ಯವಿಲ್ಲದಿದ್ದಲ್ಲಿ ಚುನಾವಣಾಧಿಕಾರಿಯವರ ಚಿಹ್ನೆ ಹಂಚಿಕೆಯೇ ಅಂತಿಮವಾಗಿರುತ್ತದೆ.)**

11) ಚುನಾವಣಾ ನಾಮಪತ್ರ ಸಲ್ಲಿಸುವ ದಿನದಿಂದ ಚುನಾವಣೆ ಮುಗಿಯುವವರೆಗು ಸಾರ್ವಜನಿಕ ರಜಾ ದಿನಗಳಂದು ಕೇಂದ್ರ ಸಂಘದ ಕಛೇರಿಯು ತೆರೆದಿರುತ್ತದೆ.

12) **ಸದಸ್ಯರು ಮತ ಚಲಾಯಿಸಲು ಮತಗಟ್ಟೆಗೆ ಬರುವಾಗ ಕೇಂದ್ರ ಸಂಘದ ಕಛೇರಿಯಿಂದ ನೀಡಿರುವ ತನ್ನದೇ ಭಾವಚಿತ್ರವಿರುವ ಗುರುತಿನ ಕಾರ್ಡನ್ನು ಹಾಗೂ ಚುನಾವಣಾ ಸ್ಥಳದಲ್ಲಿ ಸಂಘದ ವತಿಯಿಂದ ನೀಡಲಾಗುವ ಮತದಾರ ಪಟ್ಟಿಯಲ್ಲಿನ ಸಂಖ್ಯೆಯನ್ನು ನಮೂದಿಸಿದ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹಾಜರುಪಡಿಸಿ, ಖುದ್ದಾಗಿ ಮತ ಚಲಾಯಿಸತಕ್ಕದ್ದು.**

13) ನಿಗಧಿತ ಸಮಯ ಮತ್ತು ಅವಧಿಯ ನಂತರ ನೀಡುವ ನಾಮಪತ್ರಗಳನ್ನು ಅಥವಾ ನಾಮಪತ್ರ ವಾಪಸ್ಸು ಪಡೆಯುವ ಅರ್ಜಿಯನ್ನು ಯಾವುದೇ ಕಾರಣದಿಂದ ಸ್ವೀಕರಿಸುವುದಿಲ್ಲ ಹಾಗೂ ಚುನಾವಣಾ ವೇಳಾಪಟ್ಟಿಯಲ್ಲಿನ ಸೂಚನೆಗಳನ್ನು ಪಾಲಿಸದಿದ್ದಲ್ಲಿ ಅಂತಹ ನಾಮಪತ್ರಗಳನ್ನು ತಿರಸ್ಕರಿಸಲಾಗುವುದು.

14) ಆಡಳಿತ ಮಂಡಳಿ ನಿರ್ದೇಶಕರಾಗಿ ಚುನಾಯಿತರಾಗಲು ಸಂಘದ ಜ್ಞಾಪನ ಹಾಗೂ ನಿಯಮ ನಿಬಂಧನೆಗಳಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಹೊಂದಿರತಕ್ಕದ್ದು.

15) ಈ ಚುನಾವಣಾ ವೇಳಾಪಟ್ಟಿ ಹಾಗೂ ಚುನಾವಣಾ ಪ್ರಕ್ರಿಯೆಗಳಲ್ಲಿ ಯಾವುದೇ ಭಿನ್ನಾಭಿಪ್ರಾಯ ಉಂಟಾದಲ್ಲಿ ಚುನಾವಣಾ ಅಧಿಕಾರಿಯವರ ತೀರ್ಮಾನವೇ ಅಂತಿಮವಾಗಿರುತ್ತದೆ.

**ದಿನಾಂಕ: 09–06–2025**
**ಸ್ಥಳ: ಬೆಂಗಳೂರು**

**ಸಹಿ/–**
**(ಶ್ರೀ ಎಸ್. ಹನುಮಂತ ಪ್ರಸಾದ್)**
**ಉಪ ಚುನಾವಣಾಧಿಕಾರಿ**
**ಕುರುಹಿನಶೆಟ್ಟಿ ಕೇಂದ್ರ ಸಂಘ (ರಿ)**

**ಸಹಿ/–**
**(ಶ್ರೀ ಎಲ್. ವಸಂತಪ್ಪ)**
**ಚುನಾವಣಾಧಿಕಾರಿ**
**ಕುರುಹಿನಶೆಟ್ಟಿ ಕೇಂದ್ರ ಸಂಘ (ರಿ)**

* ಆಯಾ ವಿಭಾಗದಲ್ಲಿ ಚುನಾವಣೆ ಅಗತ್ಯವಾದ ಚುನಾವಣಾ ನಡೆಯುವ ಮತದಾನದ ಪ್ರಕ್ರಿಯೆಯಲ್ಲಿ ಮತ್ತು ಸಿದ್ದತಾ ಕೆಲಸದಲ್ಲಿ ಮಾತ್ರ ಚುನಾವಣಾಧಿಕಾರಿಯಿಂದ ನೇಮಕಗೊಂಡ ಕೆಳಕಂಡ ಪ್ರತಿನಿಧಿಗಳು ಸಂಚಾಲಕರಾಗಿರುತ್ತಾರೆ.

| ಕ್ರ.ಸಂ. | ವಿಭಾಗ | ಹೆಸರು | ಮೊಬೈಲ್ ಸಂಖ್ಯೆ |
|---|---|---|---|
| 1. | * ಬೆಂಗಳೂರು | 1) ಎನ್. ನೀಲಕುಮಾರ್<br>2) ಟಿ. ಹೊನ್ನಪ್ಪ<br>3) ಆರ್. ಚಂದ್ರಶೇಖರ್ | 94488 26099<br>93803 45312<br>99451 73305 |
| 2. | * ಮೈಸೂರು | 1) ಕೋದಂಡರಾಮ ಶೆಟ್ಟಿ<br>2) ಕೆ.ಹೆಚ್. ನಾರಾಯಣ ಶೆಟ್ಟಿ | 98456 19730<br>98441 30004 |
| 3. | * ಕಲಬುರ್ಗಿ | 1) ಎಸ್. ಸದ್ಯೋಜಾತಪ್ಪ<br>2) ಗಣೇಶ್ ಬುಟ್ಲಾ | 94833 80683<br>92428 50639 |
| 4. | * ಬೆಳಗಾವಿ | 1) ಐ.ಎಸ್. ಯಂಡಿಗೇರಿ, ವಕೀಲರು<br>2) ಪ್ರೊ. ಗಂಗಾಧರ ಬೀಳಗಿ | 94485 80748<br>94486 03075 |




# ಕುರುಹಿನಶೆಟ್ಟಿ ಕೇಂದ್ರ ಸಂಘ (ರಿ)

ರಿ.ನಂ. 171/1928–29

**ನಂ. 5, "ಸಾಕಮ್ಮ ಭವನ", ದ್ವಾರಕಾನಾಥ್ ರಸ್ತೆ, (ಹೊಸ ಪ್ರೌಢಶಾಲೆ ರಸ್ತೆ)**
**ವಿಶ್ವೇಶ್ವರಪುರಂ, ಬೆಂಗಳೂರು – 560 004, ದೂರವಾಣಿ : 080–22425746**


**ಮಾನ್ಯ ಸದಸ್ಯರೇ,** **ಪತ್ರ ಸಂಖ್ಯೆ : ಕು,ಶೆ.ಕೇ ಸ /ಚು/01**

ಕುರುಹಿನಶೆಟ್ಟಿ ಕೇಂದ್ರ ಸಂಘ (ರಿ) ಬೆಂಗಳೂರು, ಶ್ರೀ ಅಂಬಾದಾಸ್ ವಿ. ಕಾಮೂರ್ತಿ ರವರ ಅಧ್ಯಕ್ಷತೆಯಲ್ಲಿ ನಡೆದ 31 ನೇ ಸರ್ವಸದಸ್ಯರ ಸಭೆ ದಿನಾಂಕ 29–12–2024 ಮತ್ತು 25–01–2025 ರಂದು ನಡೆದ ಕಾರ್ಯನಿರ್ವಾಹಕ ಸಮಿತಿ ಸಭೆಯ ನಿರ್ಣಯದಂತೆ ಸಂಘದ ನಿಬಂಧನೆ ಸಂಖ್ಯೆ 25(1) ಅನ್ವಯ 05 (ಐದು) ವರ್ಷ **(ಅಂದರೆ 2025–26 ರಿಂದ 2029–30 ನೇ ಅವಧಿಗೆ) 1) ಬೆಂಗಳೂರು ವಿಭಾಗ – ಬೆಂಗಳೂರು, 2) ಮೈಸೂರು ವಿಭಾಗ – ಹಾಸನ, 3) ಬೆಳಗಾವಿ ವಿಭಾಗ – ಬಾಗಲಕೋಟೆ, ಮತ್ತು ಕಲಬುರ್ಗಿ ವಿಭಾಗ – ಹೊಸಪೇಟೆ.** ಈ 4 ವಿಭಾಗದಲ್ಲಿ ಹಂತ ಹಂತವಾಗಿ ಚುನಾವಣೆ ನಡೆಸಲು ಒಮ್ಮತದಿಂದ ಒಪ್ಪಿಗೆಯನ್ನು ಸೂಚಿಸಲು ನಿರ್ಣಯಿಸಲಾಯಿತು. ಕಾರ್ಯನಿರ್ವಾಕ ಸಮಿತಿ ಸದಸ್ಯರು ಅದರಂತೆ ಈ ಚುನಾವಣೆಯನ್ನು ಪಾರದರ್ಶಕ ನಿಷ್ಪಕ್ಷಪಾತವಾಗಿ ಜರುಗಿಸಲು **ಶ್ರೀ ಎಲ್. ವಸಂತಪ್ಪ ರವರನ್ನು ಚುನಾವಣಾಧಿಕಾರಿಯಾಗಿ ಮತ್ತು ಶ್ರೀ ಎಸ್. ಹನುಮಂತ ಪ್ರಸಾದ್‌ರವರನ್ನು ಉಪ ಚುನಾವಣಾಧಿಕಾರಿಯಾಗಿ ನೇಮಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.**

ಮಾನ್ಯ ಸಂಘದ ಸದಸ್ಯರು ಚುನಾವಣಾ ಪ್ರಕ್ರಿಯೆಯಲ್ಲಿ ಈ ಮೂಲಕ ಭಾಗವಹಿಸಲು ವಿನಂತಿಸುತ್ತೇವೆ. ಚುನಾವಣೆ ವೇಳೆ, ಸ್ಥಳ ಮತ್ತು ಸಮಯವನ್ನು ಚುನಾವಣಾಧಿಕಾರಿ ಪ್ರಕಟಿಸುತ್ತಾರೆ.

**ವಂದನೆಗಳೊಂದಿಗೆ,**

**ತಮ್ಮ ವಿಶ್ವಾಸಿ,**
**ಕಾರ್ಯನಿರ್ವಾಹಕ ಸಮಿತಿಯ ಅಪ್ಪಣೆ ಮೇರೆಗೆ**
**ಸಹಿ/–**
**(ಬಿ.ಎಸ್. ಲಿಂಗರಾಜು)**
**ಪ್ರಧಾನ ಕಾರ್ಯದರ್ಶಿ**

**ಸ್ಥಳ: ಬೆಂಗಳೂರು–560004**
**ದಿನಾಂಕ: 09–06–2025**

**ವಿಶೇಷ ಸೂಚನೆ :** **1) ಗುರುತಿನ ಕಾರ್ಡನ್ನು ಪಡೆಯದ ಸದಸ್ಯರು ಸಂಘದ ಕಛೇರಿಯ ವೇಳೆಯಲ್ಲಿ ಗುರುತಿನ ಕಾರ್ಡ್ ಪಡೆಯುವುದು. 2) ವಿಳಾಸ ಬದಲಾವಣೆ ಇದ್ದರೆ ಅದನ್ನು ಸರಿಪಡಿಸಿ ರೂ. 50/– ಪಾವತಿಸಿ ಬೇರೆ ಗುರುತಿನ ಕಾರ್ಡನ್ನು ಸಂಘದ ಕಛೇರಿಯಲ್ಲಿ ಪಡೆಯುವುದು. 3) ಚುನಾವಣಾ ಸಮಯದಲ್ಲಿ ಸಂಘದ ಗುರುತಿನ ಕಾರ್ಡನ್ನು ಖಡ್ಡಾಯವಾಗಿ ಹಾಜರುಪಡಿಸುವುದು. ಸಂಘದ ಸದಸ್ಯತ್ವ, ಇತರೆ ಹೆಚ್ಚಿನ ವಿವರಗಳಿಗೆ :– ವೆಬ್‌ಸೈಟ್ : www.kuruhinasettysanga.org ನೋಡಿರಿ.**

**ಗೆ,** **ತೆರೆದ ಅಂಚೆ**

**ಇಂದ,**
**ಕುರುಹಿನಶೆಟ್ಟಿ ಕೇಂದ್ರ ಸಂಘ (ರಿ)**
**ನಂ 5 ಸಾಕಮ್ಮ ಭವನ ದ್ವಾರಕಾನಾಥ ರಸ್ತೆ (ಹೊಸ ಪ್ರೌಡಶಾಲೆ ರಸ್ತೆ)**
**ವಿಶ್ವೇಶ್ವರಪುರ , ಬೆಂಗಳೂರು–560004**
**ಫೋನ್ : 080–22425746**



ರಿ.ನಂ. 171/1928–29

# ಕುರುಹಿನಶೆಟ್ಟಿ ಕೇಂದ್ರ ಸಂಘ (ರಿ)


**ನಂ. 5, "ಸಾಕಮ್ಮ ಭವನ", ದ್ವಾರಕಾನಾಥ್ ರಸ್ತೆ, (ಹೊಸ ಪ್ರೌಢಶಾಲೆ ರಸ್ತೆ)**
**ವಿಶ್ವೇಶ್ವರಪುರಂ, ಬೆಂಗಳೂರು – 560 004, ದೂರವಾಣಿ : 080–22425746**


## ಚುನಾವಣಾ ಅಧಿಸೂಚನೆ

ಸಂಘದ ಕಾರ್ಯನಿರ್ವಾಕ ಸಮಿತಿ ಸಭೆ ನಡಾವಳಿ ಕೋರಿಕೆ ದಿನಾಂಕ 25–01–2025 ರನ್ವಯ ಕುರುಹಿನಶೆಟ್ಟಿ ಕೇಂದ್ರ ಸಂಘ (ರಿ) ವಿಶ್ವೇಶ್ವರಪುರಂ, ಬೆಂಗಳೂರು–560004, ಈ ಸಂಘದ ಕಾರ್ಯನಿರ್ವಾಹಕ ಸಮಿತಿಗೆ ಚುನಾವಣೆ ನಡೆಸಲು ನಮ್ಮನ್ನು ಚುನಾವಣಾಧಿಕಾರಿಯಾಗಿ ನೇಮಿಸಿದ್ದು ಅದರಂತೆ ಸಂಘಕ್ಕೆ ಚುನಾವಣಾ ದಿನಾಂಕದಿಂದ ಮುಂದಿನ 05 (ಐದು) ವರ್ಷ ಅವಧಿಯ ಸಂಘದ ಕಾರ್ಯನಿರ್ವಾಹಕ ಸಮಿತಿಗೆ ಸದಸ್ಯರನ್ನು ಚುನಾಯಿಸಲು ಈ ಕೆಳಕಂಡಂತೆ 4 ವಿಭಾಗವಾರು ಸ್ಥಳಗಳಲ್ಲಿ ಹಂತ ಹಂತವಾಗಿ ಚುನಾವಣೆಯನ್ನು ನಡೆಸಲಾಗುವುದೆಂದು ತಿಳಿಸಿರುವ ಚುನಾವಣಾ ವೇಳಾಪಟ್ಟಿ ಪ್ರಕಟಿಸಿ, ಈ ಚುನಾವಣಾ ವೇಳಾಪಟ್ಟಿಯನ್ನು ನೀಡಲಾಗಿದೆ.

## ಕಾರ್ಯನಿರ್ವಾಹಕ ಸಮಿತಿಗೆ ಒಟ್ಟು ಸ್ಥಾನಗಳು – 35

**ವಿವರಗಳು :–** **ಅಧ್ಯಕ್ಷ ಸ್ಥಾನ –** ಒಂದು (1), **ಮಹಿಳಾ ಸ್ಥಾನ –** ಮೂರು (3), **ಸಾಮಾನ್ಯ ಸ್ಥಾನ –** ಹತ್ತೊಂಭತ್ತು (19), ಈ ಎಲ್ಲಾ ವಿಭಾಗದ ಅರ್ಹ ಸದಸ್ಯರು ಸ್ಪರ್ದಿಸಲು ಹಾಗು ಮತ ಚಲಾಯಿಸಲು ಅರ್ಹರಾಗಿರುತ್ತಾರೆ.

**4 ವಿಭಾಗದಿಂದ ಮೀಸಲು ಸ್ಥಾನ :–** ಅ) **ಬೆಂಗಳೂರು–ಮೂರು (3),** ಆ) **ಮೈಸೂರು–ಮೂರು (3),** ಇ) **ಬೆಳಗಾವಿ–ಮೂರು (3),** ಈ) **ಕಲಬುರ್ಗಿ ಮೂರು (3)** ಆಯಾ ವಿಭಾಗದ ಅರ್ಹ ಸದಸ್ಯರು ಸ್ಪರ್ದಿಸಲು ಹಾಗು ಮತ ಚಲಾಯಿಸಲು ಮಾತ್ರ ಅರ್ಹರಾಗಿರುತ್ತಾರೆ

**ಒಂದು ವಿಭಾಗದ ಮತದಾರ ಚಲಾಯಿಸತಕ್ಕ ಒಟ್ಟು ಮತಗಳು 26 ಮಾತ್ರ**

## ಚುನಾವಣಾ ವೇಳಾಪಟ್ಟಿ

| | | |
|---|---|---|
| 1. | ಸ್ಪರ್ಧಿಸಲು ಇಚ್ಛಿಸುವಂತಹ ಅರ್ಹ ಅಭ್ಯರ್ಥಿಗಳು ನಾಮಪತ್ರವನ್ನು ಸಲ್ಲಿಸಲು ಪ್ರಾರಂಭದ ದಿನಾಂಕ, ಸಮಯ ಮತ್ತು ಸ್ಥಳ | **ದಿನಾಂಕ: 23–06–2025, ಸೋಮವಾರದಂದು ಬೆಳಗ್ಗೆ 11.00 ರಿಂದ ಸಂಜೆ 4.00** ಘಂಟೆಯವರೆಗೆ ಕೇಂದ್ರ ಸಂಘದ ಕಛೇರಿಯಲ್ಲಿ ಬೆಂಗಳೂರು ಚುನಾವಣಾ ಅಧಿಕಾರಿಯವರಿಗೆ ಅಥವಾ ಅವರಿಂದ ನೇಮಕ ಮಾಡಲ್ಪಟ್ಟವರಿಗೆ ಸಲ್ಲಿಸತಕ್ಕದ್ದು. |
| 2. | ಸ್ಪರ್ಧಿಸಲು ಇಚ್ಛಿಸುವಂತಹ ಅಭ್ಯರ್ಥಿಗಳು ನಾಮಪತ್ರವನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ | **ದಿನಾಂಕ: 30–06–2025 ಸೋಮವಾರದಂದು ಬೆಳಗ್ಗೆ 11.00 ರಿಂದ ಸಂಜೆ 4.00** ಘಂಟೆಯವರೆಗೆ ಕೇಂದ್ರ ಸಂಘದ ಕಛೇರಿಯಲ್ಲಿ ಬೆಂಗಳೂರು ಚುನಾವಣಾ ಅಧಿಕಾರಿಯವರಿಗೆ ಅಥವಾ ಅವರಿಂದ ನೇಮಕ ಮಾಡಲ್ಪಟ್ಟವರಿಗೆ ಸಲ್ಲಿಸತಕ್ಕದ್ದು. |
| 3. | ಚುನಾವಣಾ ಅಧಿಕಾರಿಯಿಂದ ನಾಮಪತ್ರಗಳ ಪರಿಶೀಲನೆ | **ದಿನಾಂಕ: 02–07–2025 ಬುಧವಾರದಂದು ಬೆಳಗ್ಗೆ 11.00 ರಿಂದ ಸಂಜೆ 4.00 ಘಂಟೆಯವರೆಗೆ** ಕೇಂದ್ರ ಸಂಘದ ಕಛೇರಿಯಲ್ಲಿ ಬೆಂಗಳೂರು ಚುನಾವಣಾ ಅಧಿಕಾರಿಯವರಿಂದ ಪರಿಶೀಲನೆ. |
| 4. | ಪರಿಶೀಲನೆ ನಂತರ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿಯ ಪ್ರಕಟಣೆ | **ದಿನಾಂಕ: 03–07–2025 ಗುರುವಾರದಂದು ಮಧ್ಯಾಹ್ನ 3.00 ಘಂಟೆಯ** ನಂತರ ಕೇಂದ್ರ ಸಂಘದ ಕಛೇರಿಯಲ್ಲಿ ಚುನಾವಣಾ ಅಧಿಕಾರಿಯವರಿಂದ. |
| 5. | ಅಭ್ಯರ್ಥಿಗಳಿಂದ ನಾಮಪತ್ರವನ್ನು ಹಿಂಪಡೆಯಲು ಕಡೆಯ ದಿನಾಂಕ | **ದಿನಾಂಕ: 05–07–2025 ಶನಿವಾರದಂದು ಮಧ್ಯಾಹ್ನ 3.00 ಘಂಟೆಯವರೆಗೆ** ಕೇಂದ್ರ ಸಂಘದ ಕಛೇರಿಯಲ್ಲಿ ಚುನಾವಣಾ ಅಧಿಕಾರಿಯವರಿಂದ ಅಥವಾ ಅವರಿಂದ ನೇಮಕ ಮಾಡಲ್ಪಟ್ಟವರಿಂದ. |
| 6. | ಚುನಾವಣೆ ಅಗತ್ಯವಿದ್ದಲ್ಲಿ, ಚುನಾವಣಾ ಕಣದಲ್ಲಿನ ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟಣೆ. | **ದಿನಾಂಕ: 06–07–2025 ಭಾನುವಾರದಂದು ಮಧ್ಯಾಹ್ನ 3.00 ಘಂಟೆ** ನಂತರ ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ ಕೇಂದ್ರ ಸಂಘದ ಕಛೇರಿಯಲ್ಲಿ ಚುನಾವಣಾ ಅಧಿಕಾರಿಯವರಿಂದ. |
| 7. | ಅರ್ಹ ಅಭ್ಯರ್ಥಿಗಳ ಚಿಹ್ನೆ ಹಂಚಿಕೆ ಸಹಿತ ಕ್ರಮಬದ್ಧವಾಗಿರುವ ಪಟ್ಟಿ ಬಿಡುಗಡೆ | **ದಿನಾಂಕ: 07–07–2025 ಸೋಮವಾರದಂದು ಮಧ್ಯಾಹ್ನ 4.00 ಘಂಟೆಯ** ನಂತರ ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ ಕೇಂದ್ರ ಸಂಘದ ಕಛೇರಿಯಲ್ಲಿ ಚುನಾವಣಾ ಅಧಿಕಾರಿಯವರಿಂದ. |
| 8. | ಅಗತ್ಯವಾದ ವಿಭಾಗದಲ್ಲಿ ಮತದಾನ ಸ್ಥಳ, ದಿನಾಂಕ ಮತ್ತು ಸಮಯ | **ಪುಟ 2 ನೋಡಿ** * |
| 9. | ಮತ ಎಣಿಕೆಯ ದಿನಾಂಕ ಮತ್ತು ಸಮಯ ಹಾಗೂ ಚುನಾವಣಾ ಫಲಿತಾಂಶ ಪ್ರಕಟಣೆ | **ಮತ ಎಣಿಕೆ ಪ್ರಾರಂಭ ದಿನಾಂಕ : 10–08–2025 ಭಾನುವಾರದಂದು** ಬೆಳಗ್ಗೆ 9.00 ಘಂಟೆಯ ನಂತರ ಕುರುಹಿನಶೆಟ್ಟಿ ಕೇಂದ್ರ ಸಂಘ (ಬೆಂಗಳೂರು), ಚುನಾವಣಾ ಫಲಿತಾಂಶ ಪ್ರಕಟಣೆ ಮತ ಎಣಿಕೆ ಮುಗಿದ ನಂತರ. |

## ಪುಟ 2

| ಕ್ರ.ಸಂ. | ವಿಭಾಗಗಳು | ದಿನಾಂಕ | ಚುನಾವಣೆ ನಡೆಯುವ ಸ್ಥಳ |
|---|---|---|---|
| **1.** | * **ಬೆಂಗಳೂರು** | **20–07–2025 ಭಾನುವಾರ** | ಕುರುಹಿನಶೆಟ್ಟಿ ಕೇಂದ್ರ ಸಂಘ, ವಿ.ವಿ. ಪುರಂ, **ಬೆಂಗಳೂರು – 560004**. 080–22425746 **ಸಮಯ :– ಬೆಳಿಗ್ಗೆ 9.00 ರಿಂದ 4.00 ಘಂಟೆವರೆಗೆ** |
| **2.** | * **ಮೈಸೂರು** | **27–07–2025 ಭಾನುವಾರ** | ಕುರುಹಿನಶೆಟ್ಟಿ ಭವನ (ಕುರುಹಿನಶೆಟ್ಟಿ ವಿದ್ಯಾರ್ಥಿನಿಲಯ) ಮಹಾತ್ಮ ಗಾಂಧಿ ರಸ್ತೆ , ರವೀಂದ್ರನಗರ, **ಹಾಸನ –573201,** ಫೋ : 9844130004 / 9845619730 **ಸಮಯ :– ಬೆಳಿಗ್ಗೆ 9.00 ರಿಂದ 4.00 ಘಂಟೆವರೆಗೆ** |
| **3.** | * **ಕಲಬುರ್ಗಿ** | **31–07–2025 ಗುರುವಾರ** | ಕುರುಹಿನಶೆಟ್ಟಿ ಸಮಾಜ (ನೇಕಾರರು ಸೇವಾ ಟ್ರಸ್ಟ್), ಶ್ರೀ ನೀಲಕಂಠೇಶ್ವರ ದೇವಸ್ಥಾನ ಆಡಳಿತ ಸಮಿತಿ, ಶ್ರೀ ನೀಲಕಂಠೇಶ್ವರ ದೇವಸ್ಥಾನ, 18ನೇ ವಾರ್ಡ್, **ಹೋಸಪೇಟೆ – 583201,** ವಿಜಯನಗರ ಜಿಲ್ಲೆ, ಫೋ : 94833 80683 / 92428 50639 **ಸಮಯ :– ಬೆಳಿಗ್ಗೆ 9.00 ರಿಂದ 4.00 ಘಂಟೆವರೆಗೆ** |
| **4.** | * **ಬೆಳಗಾವಿ** | **06–08–2025 ಬುಧವಾರ** | ಕುರುಹಿನಶೆಟ್ಟಿ ಸಮಾಜ, ಶ್ರೀ ನೀಲಕಂಠೇಶ್ವರ ಸಮುದಾಯ ಭವನ, ಬೈಪಾಸ್ ರಸ್ತೆ, ಹೆಚ್. ಪಿ. ಪೆಟ್ರೋಲ್ ಬಂಕ್ ಹತ್ತಿರ, ನವನಗರ, **ಬಾಗಲಕೋಟೆ – 587103** ಫೋ : 94485 80748 / 94486 03075 **ಸಮಯ :– ಬೆಳಿಗ್ಗೆ 9.00 ರಿಂದ 4.00 ಘಂಟೆವರೆಗೆ** |

## ಸೂಚನೆಗಳು

1) ಆಯಾ ವಿಭಾಗಕ್ಕೆ ಮೀಸಲಿರಿಸಿದ ಸಂಖ್ಯೆಯ ಸದಸ್ಯರನ್ನ ಆಯ್ಕೆ ಮಾಡಲು ಆಯಾ ವಿಭಾಗದ ಸದಸ್ಯರು ಮಾತ್ರ ಮತ ಚಲಾಯಿಸತಕ್ಕದ್ದು ಹಾಗೂ ಆಯಾ ವಿಭಾಗದ ಸದಸ್ಯರು ಆಯಾ ವಿಭಾಗದ ಉಮೇದುವಾರರಾಗಿ ಸ್ಪರ್ದಿಸಲು ನಾಮಪತ್ರ ಸಲ್ಲಿಸತಕ್ಕದ್ದು ಮತ್ತು ಆಯಾ ವಿಭಾಗದ ಉಮೇದುವಾರರಿಗೆ ಅನುಮೋದಕರಾಗಿ ಸಹಿ ಮಾಡಲು ಆಯಾ ವಿಭಾಗದ ಸದಸ್ಯರು ಮಾತ್ರ ಅರ್ಹರಾಗಿರುತ್ತಾರೆ.

2) ಚುನಾವಣೆಯನ್ನು ರಹಸ್ಯ ಮತದಾನದ ಪದ್ದತಿ ಪ್ರಕಾರ ನಡೆಸಲಾಗುವುದು ಹಾಗೂ ಚುನಾವಣಾ ಸ್ಥಳದಲ್ಲಿ ಚುನಾವಣಾ ಅಯೋಗದ ನೀತಿ ನಿಯಮಗಳನ್ನು ಪಾಲಿಸಲಾಗುವುದು..

3) ನಾಮಪತ್ರದ ಜೊತೆಯಲ್ಲಿ ಉಮೇದುವಾರರ ಅನುಮೋದಕರಾಗಿರುವವರು ಸಂಘದಿಂದ ನೀಡಲ್ಪಟ್ಟ ಗುರುತಿನ ಕಾರ್ಡ್‌ನ ಜೆರಾಕ್ಸ್ ಪ್ರತಿಯನ್ನು ಸ್ವದೃಢೀಕರಣದೊಂದಿಗೆ ಕಡ್ಡಾಯವಾಗಿ ಲಗತ್ತಿಸಿ ಸಲ್ಲಿಸುವುದು.

4) ಆಯಾ ವಿಭಾಗಗಳಿಂದ ಚುನಾವಣೆಗೆ ಸ್ಪರ್ದಿಸಲು ಇಚ್ಛಿಸುವ ಸದಸ್ಯರು ನಾಮಪತ್ರಗಳನ್ನು ಮತ್ತು ನಾಮಪತ್ರವನ್ನು ವಾಪಸ್ಸು ಪಡೆಯಲು ಸಲ್ಲಿಸುವ ಪತ್ರಗಳನ್ನು ಕೇಂದ್ರ ಸಂಘದ ಕಛೇರಿಯಲ್ಲಿ (ಬೆಂಗಳೂರು) ವೇಳಾಪಟ್ಟಿಯಲ್ಲಿ ನಿಗಧಿಪಡಿಸಿದಂತೆ ಚುನಾವಣಾ ಅಧಿಕಾರಿಯವರಿಂದ ಅಥವಾ ನೇಮಕ ಮಾಡಲ್ಪಟ್ಟವರಿಂದ ಪಡೆಯಬಹುದಾಗಿದೆ.

5) (ಅ) ಸಂಘದ ಒಬ್ಬ ಸದಸ್ಯರು ಒಂದು ಸ್ಥಾನಕ್ಕೆ ಮಾತ್ರ ಸ್ಪರ್ಧಿಸತಕ್ಕದ್ದು.

(ಆ) ಆಯಾ ವಿಭಾಗಗಳಿಂದ ಚುನಾವಣೆಗೆ ಸ್ಪರ್ದಿಸಲು ಇಚ್ಛಿಸುವ ಸದಸ್ಯರು ನಾಮಪತ್ರಗಳನ್ನು ಮತ್ತು ನಾಮಪತ್ರವನ್ನು ವಾಪಸ್ಸು ಪಡೆಯಲು ಸಲ್ಲಿಸುವ ಪತ್ರಗಳನ್ನು ಕೇಂದ್ರ ಸಂಘದ ಕಛೇರಿಯಲ್ಲಿ (ಬೆಂಗಳೂರು) ವೇಳಾಪಟ್ಟಿಯಲ್ಲಿ ನಿಗಧಿಪಡಿಸಿದಂತೆ ಚುನಾವಣಾ ಅಧಿಕಾರಿಯವರಿಂದ ಅಥವಾ ನೇಮಕ ಮಾಡಲ್ಪಟ್ಟವರಿಗೆ ಉಮೇದುವಾರರೇ ಖುದ್ದಾಗಿ ಸಲ್ಲಿಸುವುದು.

6) ಸದಸ್ಯರುಗಳು ಒಬ್ಬ ಉಮೇದುವಾರರಿಗೆ ಮಾತ್ರ ಅನುಮೋದಕರಾಗತಕ್ಕದ್ದು, ತಪ್ಪಿದಲ್ಲಿ ಒಂದಕ್ಕಿಂತ ಹೆಚ್ಚಾಗಿ ಅನುಮೋದಕರಾಗಿ ಸಹಿ ಮಾಡಲ್ಪಟ್ಟ ಎಲ್ಲಾ ನಾಮಪತ್ರಗಳನ್ನು ತಿರಸ್ಕರಿಸಲಾಗುವುದು.

**7) ಕಾರ್ಯನಿರ್ವಾಹಕ ಸಮಿತಿ ಸಭೆ ದಿನಾಂಕ 25–01–2025ರಂದು ಪಡೆದ ನಿರ್ಣಯದಂತೆ ಚುನಾವಣೆಗೆ ಸ್ಪರ್ದಿಸುವ ಪ್ರತಿಯೊಬ್ಬ ಅಭ್ಯರ್ಥಿಯು ಸಂಘದ ಹೆಸರಿಗೆ ನಗದು ರೂಪದಲ್ಲಿ ಅಥವಾ ಆನ್‌ಲೈನ್ ರೂಪದಲ್ಲಿ ರೂ. 1000/– (ಒಂದು ಸಾವಿರ ರೂಪಾಯಿ ಮಾತ್ರ) ನಾಮಪತ್ರ ಅರ್ಜಿಗಾಗಿ (ಹಣ ಹಿಂದಿರುಗಿಸಲಾಗುವುದಿಲ್ಲ) ರೂ.2000/– ಗಳನ್ನು (ಎರಡು ಸಾವಿರ ರೂಪಾಯಿಗಳು ಮಾತ್ರ) ಚುನಾವಣಾ ಠೇವಣಿಯಾಗಿ ಪಾವತಿಸಬೇಕು. ಪಾವತಿಸಿದ ರಸೀದಿಯನ್ನು ನಾಮಪತ್ರದೊಂದಿಗೆ (ಒರಿಜಿನಲ್) ಲಗತ್ತಿಸಬೇಕು. (ಚುನಾವಣಾ ಠೇವಣಿಯನ್ನು ಸಂದಾಯ ಮಾಡದೆ ಸಲ್ಲಿಸುವ ನಾಮಪತ್ರಗಳನ್ನು ತಿರಸ್ಕರಿಸಲಾಗುವುದು).**

**8) ಉಮೇದುವಾರರು ತಮ್ಮ ನಾಮಪತ್ರದಲ್ಲಿ ತಾವು ಯಾವ ವಿಭಾಗದಿಂದ ಮತ್ತು ಯಾವ ಸ್ಥಾನಕ್ಕೆ ಸ್ಪರ್ಧಿಸುತ್ತೀರಿ ಎಂಬುದನ್ನು ಸ್ಪಷ್ಟವಾಗಿ ನಮೂದಿಸಬೇಕು.**

9) ಯಾವುದೇ ಅಭ್ಯರ್ಥಿಯು ಚುನಾಯಿತನಾಗದಿದ್ದಲ್ಲಿ ಅಯಾ ಚುನಾವಣೆಯಲ್ಲಿ ಮತದಾನವಾದ ಕ್ರಮಬದ್ಧ ಮತಗಳ ಒಟ್ಟು ಸಂಖ್ಯೆಯ ಆರನೇ ಒಂದು ಭಾಗಕ್ಕಿಂತ 1/6 ಕಡಿಮೆ ಇದ್ದಲ್ಲಿ ಅವರ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.